Reg No. B G 155 13-8-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮುದ್ರಣ ಕೆಲಸಗಾರರ ಉಪವಾಸ ಮುಷ್ಕರ

ಕೋಲಾ ಪಾನೀಯ

ನವದೆಹಲಿ—ಕೋಲಾ ಪಾನೀಯಗಳು ಹೃದಕ್ಕೆ ಕೆಡಕೆಂದು ಫಿಲಿಡೆಲ್ಫಿಯಾ ಜನರಲ್ ಆಸ್ಪತ್ರೆ ಡಾಕ್ಟರು ಹೇಳಿರುವರು.

●

ರಾಷ್ಟ್ರೀಕರಣ

ಲುಸ್ಕ— ಜಾಂಜಿಯಾವಲ್ಲಿ ಎಲ್ಲಾ ಲೋಹಗಳನ್ನೂ ರಾಷ್ಟ್ರೀಕರಣ ಮಾಡಲಾಗಿದೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯೆ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ|| ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನನೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸಿರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ತಮ್ಮ ಜ್ಞಾತಾಪೂರ್ವಕವಂದಿಸುತ್ತೇವೆ.

ಸಂಪಾದಕ : ಸತ್ಯವಾದಿ

ಚಾಮರಾಜಪುರಂ. ಮೈಸೂರು 4.

ಬೆಲೆ ಏರಿಕೆ

ನವದೆಹಲಿ— ಅವಶ್ಯ ಪದಾರ್ಥಗಳ, ಬಳಿಗ ಪದಾರ್ಥಗಳ, ಎಣ್ಣೆಗಳ ಬೆಲೆ ಹಿಂದಿನ ವರ್ಷಕ್ಕಿಂತ ಪ್ರಕೃತ ವರ್ಷದಲ್ಲಿ ಹೆಚ್ಚಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಜನಸಂಘದ ಚಳವಳಿ

ಶಿವಮೊಗ್ಗ— ಜಿಲ್ಲೆಯಲ್ಲಿ ನೆರೆವೇಗ ಬೇಕಾದ ಅನೇಕ ಕಾರ್ಯಗಳನ್ನು ಜಾರಿಗೆ ತರಲು ಒತ್ತಾಯ ಮಾಡುವುದಕ್ಕಾಗಿ ಜನ ಸಂಘ ತಾ|| 15ರಿಂದ ಚಳವಳಿ ಹೂಡಲಿದೆ

★

ಪತ್ರಿಕಾ ಗೋಷ್ಠಿ

ಮೈಸೂರು— ಪುರಜನರಿಗೆ ಅವಶ್ಯವಾದ ನೀರು, ದೀಪ ಮುಂತಾದ ಸೌಕರ್ಯಗಳನ್ನು ಒದಗಿಸುವದ ಪುರಸಭಾ ಸದಸ್ಯರ ಕರ್ತವ್ಯವೆಂದೂ, ಇಲ್ಲಿ ಯಾವ ಪಕ್ಷವೂ ರಾಜಕೀಯ ತರಬಾರದೆಂದೂ, ಒಟ್ಟುಗೂಡಿಸಿ ಜನತೆಗೆ ದ್ರೋಹವಾಗದಂತೆ ಸದಸ್ಯರು ನೋಡಿಕೊಳ್ಳಬೇಕೆಂದೂ ಸೋಮವಾರ ಪತ್ರಿಕಾ ಗೋಷ್ಠಿಯಲ್ಲಿ ಪುರಸಭಾ ಸದಸ್ಯ ಡಾ|| ಪಿ. ಡಿ. ಕೃಷ್ಣಸ್ವಾಮಿಯವರು ತಿಳಿಸಿದರು.

★

ಹುಡುಗಿಯರ ಮದುವೆವಯಸ್ಸು

ನವದೆಹಲಿ— ಹುಡುಗಿಯರ ಮದುವೆ ವಯಸ್ಸನ್ನು 21 ವರ್ಷಕ್ಕೆ ಹೆಚ್ಚಿಸಬೇಕೆಂದು ಯೋಜಿಸಿರುವ ಶಾಸನವು ಎಲ್ಲ ಕೋಮಿನವರಿಗೂ ಅನ್ವಯಿಸುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

●

ಉಪಾಧ್ಯಕ್ಷತೆಗೆ

ನವದೆಹಲಿ— ರಾಷ್ಟ್ರ ಉಪಾಧ್ಯಕ್ಷರ ಸ್ಥಾನಕ್ಕೆ 6 ಮಂದಿ ಸ್ಪರ್ಧಿಸಿರುವರು.

ಸಾಲಾ

ಬೊಂಬಾಯಿ— 15 ರಾಜ್ಯಗಳು ಒಟ್ಟು ಎತ್ತುವ ರೂ. 155 ಕೋಟಿಯಲ್ಲಿ ಮೈಸೂರು ರಾಜ್ಯದ್ದು ರೂ 10 ಕೋಟಿ.

★

ಚಿನದ ಹತೋಟಿ

ನವದೆಹಲಿ— ಚಿನ್ನದ ಹತೋಟಿ ಶಾಸನದ ಆಶಯ ವಿಫಲವಾಗಿದ್ದು, ಅದರಿಂದ ಅಕ್ರಮ ಸಾಗಾಣಿಕೆ ತಪ್ಪುವುದಕ್ಕಾಗಲೀ ಚಿನ್ನದ ಬೆಲೆ ತಗ್ಗುವುದಕ್ಕಾಗಲೀ ಸಹಾಯವಾಗಿಲ್ಲವೆಂದು ಲೋಕಸಭೆಯಲ್ಲಿ ಅನೇಕ ಸದಸ್ಯರು ಹೇಳಿದರು – ಈ ಶಾಸನವು ಅಕ್ರಮ ಸಾಗಾಣಿಕೆಗಾರರು ಹೆಚ್ಚು ಲಾಭ ಗೊಳ್ಳಲೂ, ಅಧಿಕಾರಿಗಳು ಹೆಚ್ಚು ಹಣ ಮಾಡಿಕೊಳ್ಳಲೂ ಸಹಾಯಕವಾಗಿದೆಯೆಂದು ಲೋಬೋ ಪ್ರಭು (ಸ್ವ) ಹೇಳಿದರು – ಇದನ್ನು ಜಾರಿಗೆ ತಂದ ಮೊರಾರ್ಜಿ ದೇಸಾಯರ ಜೊತೆಯಲ್ಲಿ ಇದೂ ಹೋಗಬೇಕಿತ್ತು ಎಂದು ಶ್ರೀ ವಿಶ್ವನಾಥ್ (ಡಿಎಂಕೆ) ಹೇಳಿದರು – ಅನೇಕ ಹಿರಿಯ ಕಾಂಗ್ರೆಸ್ಸಿಗರೂ ಟೀಕಿಸಿದರು.

★

ದಂಪತಿಗಳಿಗೆ ರೂ. 1000

ಬೊಂಬಾಯಿ— ಅಂತರ ಕೋಮುಗಳಲ್ಲಿ ವಿವಾಹವಾದ ದಂಪತಿಗಳಿಗೆ ರೂ. 1 ಸಾವಿರ ಪಾರಿತೋಷಿಕ ಕೊಡಲು ಪಂಜಾಬು ಸರಕಾರ ಯೋಜಿಸಿರುವದೆಂದು ವರದಿಯಾಗಿದೆ.

★

ಮನೆಗೆ ಬಂದರು

ಹೌಸ್ಟನ್— ಚಂದ್ರಗ್ರಹಕ್ಕೆ ಹೋಗಿ ಬಂದ, ಏನಾದರೂ ಸಾಂಕ್ರಾಮಿಧಿ ತಂದಿರಬಹುದೆಂಬ ಶಂಕೆಯಿದ ಪ್ರತ್ಯೇಕವಾಗಿ ಇಡಲಾಗಿದ್ದ ಮೂವರೂ ಪರೀಕ್ಷಾ ಅವಧಿ ಕಳೆದು ತಮ್ಮ ಮನೆಗಳಿಗೆ ವಾಪಸ್ಸಾದರು.

ರಾಷ್ಟ್ರೀಕರಣವಿಲ್ಲ

ನವದೆಹಲಿ— ಪತ್ರಿಕೆಗಳ ರಾಷ್ಟ್ರೀಕರಣ ವಿಲ್ಲವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ಅನ್ನ ಸತ್ಯಾಗ್ರಹ

ಬೆಂಗಳೂರು— ತಮ್ಮ ಕೇಳಿಕೆಗಳನ್ನು ನೆರೆವೇರಿಸಲು ಒತ್ತಾಯ ಮಾಡುವದಕ್ಕಾಗಿ ಸರ್ಕಾರಿ ಮುದ್ರಣಾಲಯ ನೌಕರರು ತಾ| 15 ಸ್ವತಂತ್ರ ದಿನೋತ್ಸವದಂದ ಉಪವಾಸ ಆಚರಿಸಲಿರುವರು.

★

ವೀಸಾ ವಜಾ ಒಪ್ಪಂದ

ನವದೆಹಲಿ— ಭಾರತ ಮತ್ತು ಯುಗೊಸ್ಲೋವಿಯಾ ವೀಸಾ ವಜಾ ಒಪ್ಪಂದ ಮಾಡಿಕೊಂಡಿವೆ – ಇದರಂತೆ ಆ ದೇಶದವರು ವೀಸಾ ಇಲ್ಲದೆ 90 ದಿನಗಳಿರಬಹುದು.

●

ಚಿಕ್ಕ ಕಾರ್

ನವದೆಹಲಿ— ಚಿಕ್ಕ ಕಾರ್ ತಯಾರಿಕೆ ವಿಷಯದಲ್ಲಿ ತೀರ್ಪಾಗದ 24 ಅರ್ಜಿಗಳಿವೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

○\

ಜೈನ ವಿಶ್ವವಿದ್ಯಾನಿಲಯ

ಬೆಂಗಳೂರು— 1974 ರಲ್ಲಿ ಜೈನ ಮತ ಸ್ಥಾಪಕ ಮಹಾವೀರಸ್ವಾಮಿಯ 2500 ನೇ ಜಯಂತ್ಯುತ್ಸವ ಸಂದರ್ಭದಲ್ಲಿ ದೆಹಲ್ಲಿಯಲ್ಲಿ ಜೈನ ವಿಶ್ವವಿದ್ಯಾಲಯ ಸ್ಥಾಪಿಸಲಾಗುವದೆಂದು ಆಚಾರ್ಯ ತುಳಸಿಯವರು ಹೇಳಿದರು.

★

ನೌಕರರ ಅಸ್ತಿಪಟ್ಟಿ

ಕಲ್ಕತ್ತಾ— ಪಶ್ಚಿಮ ಬಂಗಾಳ ಸರಕಾರವು ಭ್ರಷ್ಟಾಚಾರ ತಪ್ಪಿಸಲು ತನ್ನ ನೌಕರರು ತಮ್ಮ ಚರ ಸ್ಥಿರ ಆಸ್ತಿಪಾಸ್ತಿಗಳ ಲೆಕ್ಕ ಕೊಡಬೇಕೆಂದು ತಿಳಿಸಿದೆ.

ನರಿಗಳೊಡನೆ ವಿಜ್ಞಾನಿ

ಹ್ಯಾಂಬರ್ಗ್ (ಡೂಡ್)— ಹ್ಯಾಂಬರ್ಗ್ ನಗರದ ಉತ್ತರ ಭಾಗದಲ್ಲಿನ ಕಾಡಿನಲ್ಲಿ ಒಬ್ಬ ಯುವಕ ವಿಜ್ಞಾನಿಯು ಜೆನ್ನಾಗಿ ಬೆಳೆದ ಏಳು ತೋಳಗಳೊಡನೆ ಸದಾ ಇರುವ ದೃಶ್ಯವನ್ನು ಸಾಮಾನ್ಯವಾಗಿ ಕಾಣಬಹುದು. ಆತನು ತೋಳಗಳನ್ನ ಚಿಕ್ಕಂದಿನಿಂದಲೂ ಹಾಲು ಕುಡಿಸಿ ಸಾಕುತ್ತಾ ಅವರೊಡನಿದ್ದು ಅದರ ಗುಣ ಮತ್ತು ಅವರ ಸ್ವಾಭಾವಿಕ ಗುಣಗಳನ್ನು ಗ್ರಹಿಸುವುದೇ ಆತನ ಮುಖ್ಯ ಉದ್ದೇಶವಾಗಿದೆ. ಆತನು ತನ್ನ ಪಿ ಹೆಚ್ ಡಿ ಡಿಗ್ರಿಯನ್ನು ಪಡೆಯಲು ತನ್ನ ಈ ಅನುಭವವನ್ನೂ ಸಾಯಿ ಮತ್ತು ತೋಳಗಳಿಗಿರುವ ಸಾಮಾನ್ಯ ವೈಷಮ್ಯಗಳನ್ನು ಕುರಿತ ಪ್ರಬಂಧ ಬರೆದಿದ್ದಾನೆ. ಆತನ ಗರ್ವವನ್ನು ಬೆಳೆಸಿ ಅವುಗಳಂತೆಯೇ ಕೂಗುತ್ತಾ ಅವುಗಳ ಪ್ರೀತಿಗೆ ಪಾತ್ರನಾಗಿದ್ದಾನೆ. ನಾಯಿಗಳಿಗಿಂತಲೂ ಸುಲಭವಾಗಿ ಇವುಗಳನ್ನು ಪಳಗಿಸಬಹುದೆಂಬುದು ಆತನ ಅಭಿಪ್ರಾಯ. (ಯು ಪಿ ಎಸ್)

ಗಲಭೆಗಾರರನ್ನು ಎದುರಿಸಲು ಪೋಲೀಸುಗಾರರಿಗೆ ಪ್ರತ್ಯೇಕ ಶಿಕ್ಷಣ

ಪಶ್ಚಿಮ ಬರ್ಲಿನ್— ರಾಷ್ಟ್ರಗಳಲ್ಲಿ ಅಭಿಪ್ರಾಯ ವೈತ್ಯಾಸದಿಂದ ನಡೆಯಬಹುದಾದ ಗಲಭೆ, ಮುಷ್ಕರ, ವಿದ್ಯಾರ್ಥಿ ಮುಷ್ಕರ ಇವುಗಳನ್ನು ಎದುರಿಸಲು ಕೆಲವು ಸ್ವತಂತ್ರಾಭಿಲಾಷಿಯಾದ ಚುನಾಯಿತರಾದ ಪೋಲೀಸು ಅಧಿಕಾರಿಗಳಿಗೆ ರಾಜಕೀಯ ಚಾರಿತ್ರಿಕ ವಿಚಾರ ಶಿಕ್ಷಣ ಕೊಡುವ ವ್ಯವಸ್ಥೆ ಹೊಸದಾಗಿ ಮಾಡಲಾಗಿದೆ.— ಈಗ 47 ಜನ ಶಿಕ್ಷಣ ಪಡೆಯುವರು.

ಗಾಂಧೀಜಿ ಅಮೃತವಾಣಿ

ನಾನು ಹಿಂದು, ನೀನು ಮುಸ್ಲಿಂ, ಅಥವಾ ನಾನು ಗುಜರಾತಿ, ನೀನು ಮದ್ರಾಸಿ ಎಂಬೆಲ್ಲ ವಿಚಾರವನ್ನು ಮರೆತುಬಿಡೋಣ : ಭಾರತದ ಸಾಮಾನ್ಯ ರಾಷ್ಟ್ರೀಯತ್ವದಲ್ಲಿಯೇ ' ನಾನು " ' ನನ್ನದು ' ಎಂಬುದನ್ನು ಕಂಡುಕೊಳ್ಳೋಣ.

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja Mysore and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

ಜಯಪ್ರದ 3 ನೇ ವಾರ

ವುಡ್‌ಲಾಂಡ್ಸ್

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲ್ಕ ರಹೆಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 5 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಾಲನೆದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

SHAKTI

SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4.